# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008


**: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂದತೆ ಅಮೃತಂ :**

**ಸಂಖ್ಯೆ:ದಾವಿವಿ/ಮಾಸನಿ-ನೇಮಕಾತಿ/2022-23/** 2278 **ದಿನಾಂಕ:19.09.2022**

## ನೇಮಕಾತಿ ಮರು-ಅಧಿಸೂಚನೆ

**ವಿಷಯ:** ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಕಲ್ಯಾಣ ಕರ್ನಾಟಕ ವೃಂದದ ಹಾಗೂ ಮಿಕ್ಕುಳಿದ (ಸ್ಥಳೀಯ) ವೃಂದದ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಅರ್ಜಿಗಳನ್ನು ಮರು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:**

1. ಸರ್ಕಾರಿ ಆದೇಶ ಸಂಖ್ಯೆ: ಇಡಿ 14 ಯುಎನ್ಇ 2015 ಬೆಂಗಳೂರು, ದಿನಾಂಕ:16.09.2016
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 100 ಯುಎನ್ಇ 2016 ಬೆಂಗಳೂರು, ದಿನಾಂಕ:16.09.2016
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 589 ಯುಎನ್ಇ 2015 ಬೆಂಗಳೂರು, ದಿನಾಂಕ:19.11.2016
4. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ 08 ಸೆಹಿಮ 95, ದಿನಾಂಕ:20.06.1995
5. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ 53 ಸೇನೆನಿ 2007, ದಿನಾಂಕ:04.01.2008
6. ಸರ್ಕಾರದ ಪತ್ರ ಸಂಖ್ಯೆ: ಇಡಿ 14 ಯುಎನ್ಇ 2015, ದಿನಾಂಕ:19.11.2016
7. ಸರ್ಕಾರದ ಪತ್ರ ಸಂಖ್ಯೆ: ಇಡಿ 496 ಯುಎನ್ಇ 2016, ದಿನಾಂಕ:08.12.2016.
8. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಅನುಮೋದನೆ ಪತ್ರ ಸಂಖ್ಯೆ: ಸಕನಿ/ಮೀ.ಜಾ.ಕೋ/ಸಿಆರ್-2016-17, ದಿನಾಂಕ:10.01.2017
9. ಆಯುಕ್ತರು, ಹಿಂದುಗಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅನುಮೋದನೆ ಪತ್ರ ಸಂಖ್ಯೆ: ಹಿಂವಕನಿ/ಮಾಶಾ/ಸಿಆರ್-8/2016-17, ದಿನಾಂಕ:17.01.2017
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರ ಅನುಮೋದನೆ ಪತ್ರ ಸಂಖ್ಯೆ: ಇಡಿ 36 ಯುಎನ್ಇ 2017, ದಿನಾಂಕ:24.01.2017
11. ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪತ್ರ ಸಂಖ್ಯೆ: GS 03 DUM 2017, ದಿನಾಂಕ:01.03.2017
12. ದಾವಣಗೆರೆ ವಿಶ್ವವಿದ್ಯಾನಿಲಯದ ನೇಮಕಾತಿ ಅಧಿಸೂಚನೆ ಸಂಖ್ಯೆ: ದಾವಿವಿ/ಮಾಸನಿ/459/2016-17/6650, ದಿನಾಂಕ:02.03.2017
13. ದಾವಣಗೆರೆ ವಿಶ್ವವಿದ್ಯಾನಿಲಯದ ನೇಮಕಾತಿ ಅಧಿಸೂಚನೆ ಸಂಖ್ಯೆ: ದಾವಿವಿ/ಮಾಸನಿ/ಹೈಕ-459/2016-17/6648, ದಿನಾಂಕ:02.03.2017
14. ದಾವಣಗೆರೆ ವಿಶ್ವವಿದ್ಯಾನಿಲಯದ ನೇಮಕಾತಿ ಅಧಿಸೂಚನೆ ಸಂಖ್ಯೆ: ದಾವಿವಿ/ಮಾಸನಿ/459/2017-18/2874D, ದಿನಾಂಕ:20.07.2017
15. ದಾವಣಗೆರೆ ವಿಶ್ವವಿದ್ಯಾನಿಲಯದ ನೇಮಕಾತಿ ಅಧಿಸೂಚನೆ ಸಂಖ್ಯೆ: ದಾವಿವಿ/ಮಾಸನಿ/ಹೈಕ-459/2017-18/2874B, ದಿನಾಂಕ:20.07.2017
16. ದಾವಣಗೆರೆ ವಿಶ್ವವಿದ್ಯಾನಿಲಯದ ನೇಮಕಾತಿ ಅಧಿಸೂಚನೆ ಸಂಖ್ಯೆ: ದಾವಿವಿ/ಮಾಸನಿ ನೇಮಕಾತಿ/199/2017-18/6139, ದಿನಾಂಕ:02.02.2018
17. ದಾವಣಗೆರೆ ವಿಶ್ವವಿದ್ಯಾನಿಲಯದ ನೇಮಕಾತಿ ಅಧಿಸೂಚನೆ ಸಂಖ್ಯೆ: ದಾವಿವಿ/ಮಾಸನಿ ನೇಮಕಾತಿ/199/2017-18/6138, ದಿನಾಂಕ:02.02.2018
18. ಸರ್ಕಾರಿ ಆದೇಶ ಸಂಖ್ಯೆ: ಇಡಿ 207 ಯುಎನ್ಇ 2021, ದಿನಾಂಕ:03.03.2022
19. ಸಿಂಡಿಕೇಟ್ ಅನುಮೋದನೆ ದಿನಾಂಕ:10.08.2022
20. ಮಾನ್ಯ ಕುಲಪತಿಗಳ ಆದೇಶ ದಿನಾಂಕ:19.09.2022

*****

ಸರ್ಕಾರದ ಉಲ್ಲೇಖ (1) ರಿಂದ (11) ಹಾಗೂ (18)ರ ಆದೇಶದ ಮೇರೆಗೆ ಹಾಗೂ ದಿನಾಂಕ:10.08.2022 ರಂದು ಜರುಗಿದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಅನುಮೋದನೆ ಮೇರೆಗೆ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಕಲ್ಯಾಣ ಕರ್ನಾಟಕ ವೃಂದ ಹಾಗೂ ಮಿಕ್ಕುಳಿದ (ಸ್ಥಳೀಯ) ವೃಂದದಲ್ಲಿರುವ ಈ ಕೆಳಗೆ ಕಾಣಿಸಿದ ಬೋಧಕೇತರ ಹುದ್ದೆಗಳಿಗೆ ಭಾರತೀಯ ಸಂಜಾತ ನಾಗರೀಕರಿಂದ ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿ ಅರ್ಜಿಗಳನ್ನು 10 (ಹತ್ತು) ಪ್ರತಿಗಳಲ್ಲಿ ಮರು ಆಹ್ವಾನಿಸಲಾಗಿದೆ.

**ಹುದ್ದೆಗಳ ವಿವರಗಳು :**

| ಕ್ರ. ಸಂ | ಹುದ್ದೆಯ ಪದನಾಮ | ವೇತನ ಶ್ರೇಣಿ | ಖಾಲಿ ಹುದ್ದೆಗಳ ಸಂಖ್ಯೆ | | ಪ್ರವರ್ಗವಾರು ಅರ್ಹತೆ | |
|---|---|---|---|---|---|---|
| | | | ಕಲ್ಯಾಣ ಕರ್ನಾಟಕ ವೃಂದದ ಖಾಲಿ ಹುದ್ದೆಗಳ ಸಂಖ್ಯೆ | ಮಿಕ್ಕುಳಿದ (ಸ್ಥಳೀಯ) ವೃಂದದ ಖಾಲಿ ಹುದ್ದೆಗಳ ಸಂಖ್ಯೆ | ಕಲ್ಯಾಣ ಕರ್ನಾಟಕ ವೃಂದ | ಮಿಕ್ಕುಳಿದ ವೃಂದ |
| 01 | ಸಹಾಯಕ ಕುಲಸಚಿವ | 52,650 ರಿಂದ 97,100 | 01 | 01 | ಮೀಸಲಾತಿ ಇರುವುದಿಲ್ಲ. ಮೆರಿಟ್ ಆಧಾರದಲ್ಲಿ ತುಂಬಲಾಗುವುದು | |
| 02 | ಕಛೇರಿ ಅಧೀಕ್ಷಕ | 43,100 ರಿಂದ 83,900 | 01 | 01 | ಮೀಸಲಾತಿ ಇರುವುದಿಲ್ಲ. ಮೆರಿಟ್ ಆಧಾರದಲ್ಲಿ ತುಂಬಲಾಗುವುದು | |
| 03 | ಪ್ರಥಮ ದರ್ಜೆ ಸಹಾಯಕ | 30,350 ರಿಂದ 58,250 | 01 | 05 | ಮೀಸಲಾತಿ ಇರುವುದಿಲ್ಲ. ಮೆರಿಟ್ ಆಧಾರದಲ್ಲಿ ತುಂಬಲಾಗುವುದು | GM(O)-01<br>GM(W)-01<br>SC(O)-01<br>ST(O)-01<br>Cat-I(O)-1 |

**<u>ಸೂಚನೆ:</u> ಉಲ್ಲೇಖ (12) ರಿಂದ (17)ರವರೆಗಿನ ಅಧಿಸೂಚನೆಗಳನ್ವಯ ಮೇಲ್ಕಂಡ ಹುದ್ದೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದು. ಈ ಹಿಂದೆ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಹೆಚ್ಚುವರಿ ವಿದ್ಯಾರ್ಹತೆಗಳನ್ನು ಹಾಗೂ ಪೂರಕ ದಾಖಲೆಗಳನ್ನು ಪಡೆದಿದ್ದಲ್ಲಿ, ದಾಖಲೆಗಳ ಪ್ರತಿಗಳೊಂದಿಗೆ ಸಲ್ಲಿಸಬಹುದಾಗಿದೆ.**

**<u>ವಿದ್ಯಾರ್ಹತೆ:</u>**

1. **ಸಹಾಯಕ ಕುಲಸಚಿವ/ನಿಬಂಧಕ:**

   Post-Graduate Degree in any discipline of a Recognized University, with at least 55% marks. <u>Desirable:</u> Administrative experience not less than 5 years in a Government / Autonomous / Higher Education Institutions.

2. **ಕಛೇರಿ ಅಧೀಕ್ಷಕ:**

Must have passed a Degree Examination in any Discipline of a Recognized University with at least II$^{nd}$ class (With Basic Computer Knowledge). Desirable: Administrative experience not less than 4 years in a Government / Autonomous / Higher Education Institutions.

3. **ಪ್ರಥಮ ದರ್ಜೆ ಸಹಾಯಕ:**

Must have passed a Degree Examination in any Discipline of a Recognized University (With Basic Computer Knowledge).

## ವಯೋಮಿತಿ

ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು ಕನಿಷ್ಠ 18 ವರ್ಷ ಪೂರೈಸಿರಬೇಕು ಹಾಗೂ ಗರಿಷ್ಠ ವಯೋಮಿತಿಯ ಒಳಗಿರಬೇಕು

(ಎ) ಪ.ಜಾತಿ, ಪ.ಪಂ ಹಾಗೂ ಪ್ರವರ್ಗ–1 ಅಭ್ಯರ್ಥಿಗಳಿಗೆ 40 ವರ್ಷ.

(ಬಿ) ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ 38 ವರ್ಷ.

(ಸಿ) ಸಾಮಾನ್ಯ ಅಭ್ಯರ್ಥಿಗಳು 35 ವರ್ಷಗಳ ವಯೋಮಿತಿಯನ್ನು ಮೀರಿರಬಾರದು.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ:55, ಸೆ.ನೆ.ನಿ.2008, ದಿನಾಂಕ:15.01.2009 ರನ್ವಯ ನಿಗದಿಪಡಿಸಲಾಗಿದೆ.

**ಸೂಚನೆ: ಉಲ್ಲೇಖ (12) ರಿಂದ (17)ರವರೆಗಿನ ಅಧಿಸೂಚನೆಗಳಿಗನುಗುಣವಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ವಿನಾಯಿತಿ ನೀಡಲಾಗುವುದು. ಆದರೆ ಪ್ರಸ್ತುತದ (ಹಾಲಿ) ಮರು ಅಧಿಸೂಚನೆ ಮೇರೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ವಯೋಮಿತಿ ಮೀರಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

## ಅಭ್ಯರ್ಥಿಗಳಿಗೆ ಸಾಮಾನ್ಯ ಮಾಹಿತಿ ಮತ್ತು ಸೂಚನೆಗಳು:

- ನಿಗದಿಪಡಿಸಿದ ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ (www.davangereuniversity.ac.in) ಪಡೆಯಬಹುದಾಗಿದೆ. ಅರ್ಜಿ ಶುಲ್ಕ ಸಾಮಾನ್ಯ, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿ ಮತ್ತು ಇತರೆ ಹಿಂದುಳಿದ ಅಭ್ಯರ್ಥಿಗಳಿಗೆ ರೂ.1,000/– (ಮರುಪಾವತಿಸಲಾಗುವುದಿಲ್ಲ). ಎಸ್.ಸಿ./ಎಸ್.ಟಿ. ಮತ್ತು ಪ್ರವರ್ಗ–1ರ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಶೇ. 50% ವಿನಾಯಿತಿ ಇರುತ್ತದೆ. ಅಲ್ಲದೇ ಅಂಗವಿಕಲ ಮತ್ತು ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಪೂರ್ಣ ವಿನಾಯಿತಿ ಇರುತ್ತದೆ. ನಿಗದಿತ ಶುಲ್ಕವನ್ನು **ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ** ಇವರಿಗೆ ಸಂದಾಯವಾಗುವಂತೆ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ (DD) ಮೂಲಕ ಸಲ್ಲಿಸುವುದು ಅಥವಾ ವಿಶ್ವವಿದ್ಯಾನಿಲಯದ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆ ಸಂಖ್ಯೆ –64056219657** ಗೆ ಚಲನ್ ಮೂಲಕ

ಶುಲ್ಕವನ್ನು ಪಾವತಿಸುವುದು. ತತ್ಸಂಬಂಧ ಪೋಸ್ಟಲ್ ಆರ್ಡರ್‌ಗಳು/ ಮನಿ ಆರ್ಡರ್‌ಗಳು/ ಬ್ಯಾಂಕ್ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

- ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) 2013ರನ್ವಯ ನೇಮಕಾತಿಯಲ್ಲಿ ಸ್ಥಳೀಯ ಅಭ್ಯರ್ಥಿಯೆಂದು ಮೀಸಲಾತಿಯನ್ನು ಕ್ಲೇಮು ಮಾಡುವ ವ್ಯಕ್ತಿಯು ಸಕ್ಷಮ ಪ್ರಾಧಿಕಾರದಿಂದ ನೀಡಲಾಗುವ ನಿಗದಿತ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರತಕ್ಕದ್ದು.
- ಭರ್ತಿ ಮಾಡಿದ ಅರ್ಜಿಯೊಂದಿಗೆ 12"X6" ಅಳತೆಯ ಸ್ವ-ವಿಳಾಸವುಳ್ಳ ಒಂದು ಲಕೋಟೆಯನ್ನು ಇಡುವುದು.
- ಭರ್ತಿ ಮಾಡಿದ ಅರ್ಜಿಯನ್ನು **ದಿನಾಂಕ:18.10.2022 ಸಂಜೆ 5.00** ಗಂಟೆಯೊಳಗಾಗಿ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577007 ಇವರಿಗೆ ತಲುಪಿಸುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ವಿದ್ಯಾರ್ಹತೆ, ಮೀಸಲಾತಿ, ಸೇವಾನುಭವಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
- ಈಗಾಗಲೇ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ತಮ್ಮ ನೇಮಕಾತಿ ಪ್ರಾಧಿಕಾರದ ಮುಖಾಂತರ ಅರ್ಜಿಯನ್ನು ನಿಗದಿತ ದಿನಾಂಕದೊಳಗೆ ವಿಶ್ವವಿದ್ಯಾನಿಲಯಕ್ಕೆ ತಲುಪುವಂತೆ ಕ್ರಮಕೈಗೊಳ್ಳುವುದು.
- ತಡವಾಗಿ ತಲುಪಿದ ಅಥವಾ ಅಪೂರ್ಣ ಹಾಗು 10 ಸೆಟ್‌ಗಳಲ್ಲಿ ಇಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಸಂಬಂಧ ಅಭ್ಯರ್ಥಿಗಳಿಗೆ ಯಾವುದೇ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.
- ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು.
- ಪ್ರವೇಶ ಪರೀಕ್ಷೆಗೆ / ಸಂದರ್ಶನ / ನೇಮಕಾತಿಯ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ದಿನ ಭತ್ಯೆ/ಪ್ರಯಾಣ ಭತ್ಯೆಯನ್ನು ನೀಡಲಾಗುವುದಿಲ್ಲ.
- ಆಯ್ಕೆಯಾದ ಅಭ್ಯರ್ಥಿಗಳು ದಾವಣಗೆರೆ ವಿಶ್ವವಿದ್ಯಾನಿಲಯದ (ದಾವಣಗೆರೆ/ಚಿತ್ರದುರ್ಗ ಜಿಲ್ಲೆಗಳ) ನೇರ ಆಡಳಿತಕ್ಕೊಳಪಟ್ಟ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲು ಸಿದ್ಧರಿರಬೇಕು.
- ಆಯ್ಕೆಯಾದ ಅಭ್ಯರ್ಥಿಗಳಿಗೆ ಸೇವಾ ಪೂರ್ವ ಪರೀಕ್ಷಾರ್ಥ ಅವಧಿಯು 02 (ಎರಡು) ವರ್ಷಗಳಾಗಿರುತ್ತದೆ. ಅಥವಾ ವಿಶ್ವವಿದ್ಯಾನಿಲಯವು ಅಗತ್ಯವಿದ್ದಲ್ಲಿ ಅದನ್ನು ಮುಂದೂಡಬಹುದು.
- ನೇಮಕಾತಿ ಅಧಿಸೂಚನೆಯಲ್ಲಿ ತಿಳಿಸಲಾಗಿರುವ ಹುದ್ದೆಗಳನ್ನು ಭರ್ತಿ ಮಾಡುವ/ಮಾಡದೇ ಇರುವ ಅಧಿಕಾರವನ್ನು ವಿಶ್ವವಿದ್ಯಾನಿಲಯ ಹೊಂದಿರುತ್ತದೆ.
- ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರುವ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು.
- ಮೀಸಲಾತಿಯನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ.08.ಸೆ.ಇ.ಮ.95, ದಿನಾಂಕ:20.06.1995 ಮತ್ತು ಸಂಖ್ಯೆ: ಸಿಆಸುಇ2007, ದಿನಾಂಕ:04.01.2008ರ ಪ್ರಕಾರ ನಿಗದಿಪಡಿಸಲಾಗಿದೆ.
- ಪ.ಜಾತಿ ಮತ್ತು ಪ.ಪಂಗಡದವರಿಗೆ ಮೀಸಲಾದ ರಿಕ್ತ ಹುದ್ದೆಗಳಿಗೆ – ಇತರ ಪ್ರವರ್ಗ ಅಥವಾ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.

- ಪ.ಜಾತಿ / ಪ.ಪಂಗಡ / ಇತರ ಪ್ರವರ್ಗಗಳ ಅಭ್ಯರ್ಥಿಗಳು – ಸಾಮಾನ್ಯ ವರ್ಗಗಳಿಗೆ ಮೀಸಲಾಗಿರುವ ರಿಕ್ತ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
- ನೇಮಕಾತಿ ಪ್ರಕ್ರಿಯೆಯು ಮುಕ್ತ ಆಯ್ಕೆ ಪದ್ಧತಿಯನ್ನು ಒಳಗೊಂಡಿರುತ್ತದೆ.
- ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಳ್ಳುವ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣ ಪತ್ರಗಳನ್ನು ತಹಶೀಲ್ದಾರರು ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಕಡಿಮೆ ಇಲ್ಲದ ಅಧಿಕಾರಿಗಳಿಂದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರತಕ್ಕದ್ದು.
- ಆಯ್ಕೆಯಾದ ಅಭ್ಯರ್ಥಿಗಳು ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ. (ವಿಶೇಷ) 04 ಪಿ.ಇ.ಟಿ 2005, ಬೆಂಗಳೂರು, ದಿನಾಂಕ:01.01.2006ರನ್ವಯ ನಿವೃತ್ತಿ ಸೌಲಭ್ಯಗಳನ್ನು ಪಡೆಯಲು ಅರ್ಹತೆವುಳ್ಳವರಾಗಿರುತ್ತಾರೆ ಹಾಗೂ ಈ ಸಂಬಂಧ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಸಹ ಪಾಲಿಸತಕ್ಕದ್ದು.

ಆದೇಶಾನುಸಾರ

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಪ್ರತಿಗಳು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
2) ವಿಶೇಷ ಕಾರ್ಯದರ್ಶಿಗಳು, ಘನತೆವೆತ್ತ ಕುಲಾಧಿಪತಿಗಳ ಕಾರ್ಯಾಲಯ, ರಾಜಭವನ, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಲ್ಯಾಣ-ಕರ್ನಾಟಕ ಕೋಶ, ಬೆಂಗಳೂರು.
4) ಕುಲಪತಿಗಳ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
5) ಕುಲಸಚಿವರ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
6) ಕುಲಸಚಿವರ ಆಪ್ತ ಕಾರ್ಯಾಲಯ (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.